ದಿನಾಂಕ 11 ನೇ ಜನವರಿ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದಃ-

ನಾನು 10 ನೇ ತರಗತಿ ತನಕ ವ್ಯಾಸಾಂಗ ಮಾಡಿದ್ದೇನೆ. ನನಗೆ ಆಂಗ್ಲ ಭಾಷೆ ಬರೆಯಲು, ಓದಲು ಬರುವುದಿಲ್ಲ. ನಾನು ಹೇಳಿದ ಹಾಗೆ ವಕೀಲರು ಪ್ರಮಾಣ ಪತ್ರವನ್ನು ತಯಾರಿಸಿದ್ದಾರೆ. ರಸ್ತೆ ಅಡ್ಡಿಪಡಿಸಿದ್ದಾರೆ ಎಂದು ದಾವೆ ಸಲ್ಲಿಸಿದ್ದೇನೆ. ನಾನು ಕಡೆಮಾಡ ಕುಟುಂಬದವರು ಎಂದರೆ ಸರಿ. ಕಡೆಮಾಡ ಕುಟುಂಬ ದೊಡ್ಡ ಕುಟುಂಬ ಎಂದರೆ ಸರಿ. ಅದರಲ್ಲಿ ಸುಮಾರು 100 ಜನ ಇದ್ದೇವೆ ಅಂದರೆ 60 ರಿಂದ 70 ಜನ ಇದ್ದೇವೆ ಎನ್ನುತ್ತಾರೆ. ಸರ್ವೆ ನಂ 18 ಗದ್ದೆ ಎಂದರೆ ಮೊದಲು ಗದ್ದೆಯಾಗಿತ್ತು ಈ ದಾವೆ ದಾಖಲಿಸಿದ ನಂತರ ತೋಟ ಮಾಡಿಕೊಂಡಿದ್ದಾರೆ ಎನ್ನುತ್ತಾರೆ. ಪ್ರತಿವಾದಿಯ ತಂದೆ ಸರ್ವೆ ನಂ 18 ಖರೀದಿಸಿದ್ದರು ಎಂದರೆ ಸರಿ. ಖರೀದಿಸಿದ ನಂತರ ಭತ್ತ ಬೆಳೆಯುತ್ತಿದ್ದರು ಎಂದರೆ ಸರಿ .

ಸರ್ವೆ ನಂ 18, ಹಾಗೂ ನಮ್ಮ ಸ್ವತ್ತಾದ ಸರ್ವೆ ನಂ 16, ಸರ್ವೆ ನಂ 15 ನಡುವೆ ಒಂದು 15 ರಿಂದ 20 ಅಡಿ ಅಗಲದ ತೋಡು ಇದೆ ಎಂದರೆ ಸರಿ. ಹಿಂದೆ ಮಳೆಗಾಲದಲ್ಲಿ ಸದರಿ ತೋಡು ನೀರು ತುಂಬಿ ಹರಿಯುತ್ತಿತ್ತು ಎಂದರೆ ಸ ರಿ. ಆ ರೀತಿ ತೋಡು ನೀರು ತುಂಬಿ ಹರಿದಾಗ ದಾಟಲು ಆಗುತ್ತಿರಲಿಲ್ಲ ಎಂದರೆ 60 – 70 ವರ್ಷದ ಹಿಂದೆ ಸರ್ಕಾರದವರು ಒಂದು Slab ಹಾಕಿದ್ದರು ಅದರೆ ಮೇಲೆ ಓಡಾಡುತ್ತಿದ್ದೆವು. ಈಗ 8 ವರ್ಷದ ಹಿಂದೆ Check dam ನಿರ್ಮಿಸಿದ್ದಾರೆ ಆದರೆ Slab ಇಲ್ಲಎನ್ನುತ್ತಾರೆ. ಸದರಿ Slab ಹಾಕಿದ್ದರು ಎಂಬ ಬಗ್ಗೆ ನನ್ನ ಬಳಿ ದಾಖಲಾತಿ ಇಲ್ಲ. ಈ ಬಗ್ಗೆ ನಿಶಾನೆ ಇರುತ್ತದೆ ಎನ್ನುತ್ತಾರೆ. ನಾನು ಹೇಳಿದಂತೆ ಸರ್ಕಾರದವರು ಯಾವುದೇ Slab ಹಾಕಿರುವುದಿಲ್ಲ ಹಾಗೂ ನಿಶಾನೆ ಸಹ ಇಲ್ಲ ಎಂದರೆ ಸರಿಯಲ್ಲ. ತೋಡು ಹರಿಯುವಾಗ ನಮಗೆ ಓಡಾಡಲು ಆಗುತ್ತಿರಲಿಲ್ಲ ಎಂದರೆ ನಾವು Slab ಮೇಲಿ ಓಡಾಡುತ್ತಿದ್ದೆವು ಎನ್ನುತ್ತಾರೆ.

ದಾವೆಯಲ್ಲಿ ಕೇಳಿರುವ ರಸ್ತೆ ಯಾವ ಸರ್ವೆ ನಂ ನಿಂದ ಪ್ರಾರಂಭವಾಗುತ್ತದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ 3/2 ರ 24 ಸೆಂಟ್ ಬಾಣೆ ಜಾಗ ಪ್ರತಿವಾದಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ 3/3 ರ 78 ಸೆಂಟ್ ಬಾಣೆ ಜಾಗ ಪ್ರತಿವಾದಿಗೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಖಾಲಿ

ಬಾಣೆ ಯಾವುದೂ ಇಲ್ಲ ಎನ್ನುತ್ತಾರೆ. ಸರ್ವೆ ನಂ 71, ಸರ್ವೆ ನಂ 72 ನಮ್ಮ ಗದ್ದೆಯ ಪಕ್ಕದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಗದ್ದೆಯ ಪಕ್ಕದಲ್ಲಿ ಇದೆ ಎನ್ನುತ್ತಾರೆ. ಸರ್ವೆ ನಂ 20/1 ಬಾಣೆ ಜಾಗ ನಮಗೆ ಸೇರಿದ ಸರ್ವೆ ನಂ 15, ಸರ್ವೆ ನಂ 16 ರ ಪಕ್ಕದಲ್ಲಿ ಇಲ್ಲ ಎಂದರೆ ನನಗೆ ಸರಿಯಾಗಿ ನೆನಪಿಲ್ಲ ಎನ್ನುತ್ತಾರೆ.

ದಾವಾ ರಸ್ತೆ ಹಾತೂರು, ಪೊನ್ನಂಪೇಟೆ ಮುಖ್ಯ ರಸ್ತೆಯಿಂದ ಪ್ರಾರಂಭವಾಗುತ್ತದೆ. ಪ್ರತಿವಾದಿಯವರು ಈ ದಾವೆ ಸಲ್ಲಿಸುವ ಮೊದಲು ಗದ್ದೆ ಮಾಡುತ್ತಿದ್ದರು ಎಂದರೆ ಸರಿ. ಗದ್ದೆ ಮಾಡುವಾಗ ಒಂದರಿಂದ 2 ಅಡಿ ಅಗಲದ ಏರಿ ಇರುತ್ತಿತ್ತು ಎಂದರೆ ಪ್ರತಿವಾದಿ ತಂದೆ 12 ಅಗಲದ ಏರಿ ಬಿಟ್ಟಿದ್ದರು ಎನ್ನುತ್ತಾರೆ. ಪ್ರತಿವಾದಿ ತಂದೆ 12 ಅಗಲದ ಏರಿ ಬಿಟ್ಟಿದ್ದಾರೆ ಎಂದು ತೋರಿಸಲು ದಾಖಲಾತಿ ಇಲ್ಲ ಎನ್ನುತ್ತಾರೆ. ಪ್ರತಿವಾದಿ ಗದ್ದೆ ಮಾಡುವಾಗ 2 ಅಗಲದ ಏರಿ ಇರಲಿಲ್ಲ 2 ಅಡಿ ಅಗಲದ ಏರಿ ಇತ್ತು ಎಂದರೆ ಸರಿಯಲ್ಲ. ಕೊಡಗಿನಲ್ಲಿ ಸಾಧಾರಣವಾಗಿ ಗದ್ದೆಯಲ್ಲಿ 2 ಅಡಿ ಅಗಲದ ಏರಿ ಓಡಾಡಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಮಾನ್ಯವಾಗಿ ಗದ್ದೆಯಲ್ಲಿ 2 ಅಡಿ ಅಗಲದ ಏರಿ ಬಿಡುತ್ತಾರೆ ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಗದ್ದೆ ಸರ್ವೆ ನಂ 15, ಸರ್ವೆ ನಂ 16 ರ ಪಕ್ಕ ಸರ್ವೆ ನಂ 11/1 ಇದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ 15 ರಲ್ಲಿ 15 ಎಕರೆ ವಿಸ್ತೀರ್ಣ ಇತ್ತು. ಸರ್ವೆ ನಂ 16 ರಲ್ಲಿ 10 ರಿಂದ 12 ಎಕರೆ ಜಾಗ ಇತ್ತು ಎನ್ನುತ್ತಾರೆ. ನನಗೆ ಸರ್ವೆ ನಂ 11/1 ರ ವಿಚಾರ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ 15, ಸರ್ವೆ ನಂ 16 ರ ಪಕ್ಕ ಸರ್ವೆ ನಂ 11/1 ಇರುವ ವಿಚಾರ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 15, ಸರ್ವೆ ನಂ 16 , ಸರ್ವೆ ನಂ 11/1 ಒಂದೇ ಕಡೆ ಇದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಮ್ಮ ಗದ್ದೆ ಪಕ್ಕ ಹಾತೂರು ಹಾಗೂ ಕುಂದಾ ಗ್ರಾಮದ ಗಡಿ ಬರುತ್ತದೆ ಎಂದರೆ ಸರಿ. ಗ್ರಾಮ ಗಡಿಯಿಂದ ಸರ್ವೆ ನಂ 15, ಸರ್ವೆ ನಂ 16 ರಿಂದ ಮುಖ್ಯ ರಸ್ತೆಗೆ 1 ವರೆ ಕಿ. ಮೀ ದೂರ ಎನ್ನುತ್ತಾರೆ. ಹಾತೂರು ಗ್ರಾಮದ ಸರ್ವೆ ನಂ 178 ಕುಂದಾ ಗ್ರಾಮಕ್ಕೆ ಹೊಂದಿಕೊಂಡಂತೆ ಇದೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

ಸರ್ವೆ ನಂ 11/1 ಕಡೇಮಾಡ ಕುಟುಂಬಕ್ಕೆ ಸೇರಿದ್ದು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸರ್ವೆ ನಂ 11/1 ಕಡೇಮಾಡ ಕುಟುಂಬಕ್ಕೆ ಸೇರಿದ್ದು ಎಂದು ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 11/1 ಕ್ಕೆ ಗ್ರಾಮದ ಗಡಿಗೆ ಮತ್ತು ಮುಖ್ಯ ರಸ್ತೆಗೆ ಹೊಂದಿಕೊಂಡಿದ್ದು, ಅದನ್ನು ದಾಟಿದರೆ ಸರ್ವೆ

ನಂ 178 ಜಾಗ ಇದೆ, ಸರ್ವೆ ನಂ 11/1 ಹಾಗೂ ಸರ್ವೆ ನಂ 178 ರ ನಡುವೆ ಗ್ರಾಮ ಗಡಿ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ಎಲ್ಲ ವಿಚಾರ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಸರ್ವೆ ನಂ 178 ಗಾಗಿ ಬಂದು ಸರ್ವೆ ನಂ 11/1 ಸಂಪರ್ಕ ಕಲ್ಪಿಸುವ ರಸ್ತೆ ನಕ್ಷೆಯಲ್ಲೂ ಸಹ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಈ ಎಲ್ಲ ವಿಚಾರ ಗೊತ್ತಿದ್ದರೂ ಸಹ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂ 15, ಸರ್ವೆ ನಂ 16, ಸರ್ವೆ ನಂ 11/1 ಹೊಂದಿಕೊಂಡಿರುವ ಕಾರಣ ರಸ್ತೆ ಮೂಲಕ ಹೊೀಗಬಹುದು ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮುಖ್ಯ ರಸ್ತೆ ಪಕ್ಕ ನಾಮೇರಾ ಕುಟುಂಬಕ್ಕೆ ಸೇರಿದ ಡಿಕ್ಸನ್ ಕಾಫಿ ಕ್ಯೂರಿಂಗ್ ಇದೆ ಎಂದರೆ ಸರಿ. ಸದರಿ ಆಸ್ತಿಯನ್ನು ನಮ್ಮ ಕುಟುಂಬದವರೇ ನಾಮೇರಾ ಕುಟುಂಬಕ್ಕೆ ಮಾರಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಾಮೇರಾ ಕುಟುಂಬದವರು ಈಗಲೂ ಕಾಲ್ನಡಿಗೆ ಮೂಲಕ ಅವರು ಖರೀದಿಸಿರುವ ಜಾಗಕ್ಕೆ ಹೋಗುತ್ತಾರೆ ಎಂದರೆ ಸರಿ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಯವರು ಕಾಫಿ ತೋಟ ಮಾಡುವಾಗ ದಾವಾ ರಸ್ತೆ ಮಾಡಿದ್ದಾರೆ ಈ ಹಿಂದೆ ಸದರಿ 12 ಅಡಿ ಅಗಲ ರಸ್ತೆ ಇರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ 18 ರಲ್ಲಿ ಎಷ್ಟು ಎಕರೆ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿಯವರು ಸದರಿ ರಸ್ತೆಯನ್ನು ತಮ್ಮ ಉಪಯೋಗಕ್ಕೆ ಮಾಡಿಕೊಂಡಿದ್ದಾರೆ ಸಾರ್ವಜನಿಕರಿಗಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಅದು ನಮ್ಮ ಕುಟುಂಬದ ರಸ್ತೆ ಎನ್ನುತ್ತಾರೆ. ಗ್ರಾಮ ನಕ್ಷೆಯಲ್ಲಿ ಸದರಿ ರಸ್ತೆಯನ್ನು ನಮೂದಿಸಲಾಗಿದೆ ಎನ್ನುತ್ತಾರೆ. ನಕ್ಷೆ ನೋಡಿದರೆ ನನಗೆ ರಸ್ತೆ ಗುರುತಿಸಲು ಆಗುವುದಿಲ್ಲ ಎನ್ನುತ್ತಾರೆ. ದಾವಾ ರಸ್ತೆ ಅದು ಸರ್ವೆ ನಂ 3/2 ಬಾಣೆ ಜಾಗಕ್ಕೆ ಕೊನೆಗೊಳ್ಳುತ್ತದೆ ಗದ್ದೆಗೆ ಸದರಿ ರಸ್ತೆ ಹೋಗುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ 3/2 ನಂತರ ಇರುವುದು ಗದ್ದೆ ಏರಿ, ರಸ್ತೆ ಅಲ್ಲ ಎಂದರೆ ಸರಿಯಲ್ಲ. ನಕ್ಷೆಯಲ್ಲಿ ಸಹ ಸರ್ವೆ ನಂ 3/2 ತನಕ ರಸ್ತೆ ತೋರಿಸಲಾಗಿದೆ ಗದ್ದೆಗೆ ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ನೋಡಿದ ನಕ್ಷೆಯಲ್ಲಿ ಸರ್ವೆ ನಂ 18 ರ ತನಕ ತೋಡಿನ ತನಕ ರಸ್ತೆ ಇದೆ ಎಂದು ನಮೂದಿಸಲಾಗಿದೆ ಎನ್ನುತ್ತಾರೆ. ಸದರಿ ನಕ್ಷೆಯನ್ನು ನಮ್ಮ ವಕೀಲರಿಗೆ ನೀಡಿದ್ದೇನೆ. ಸದರಿ ನಕ್ಷೆಯನ್ನು ಹಾಜರುಪಡಿಸಲು ತೊಂದರೆ ಇಲ್ಲ ಎನ್ನುತ್ತಾರೆ. ಸರ್ವೆ ನಂ 178 ಕ್ಕೆ ಬಂದು ಸರ್ವೆ ನಂ 11/1 ಕ್ಕೆ ಬಂದು ಸರ್ವೆ ನಂ 5 ಕ್ಕೆ ಬರುವ ಕಾಲ್ನಡಿಗೆ ರಸ್ತೆ ಇರುವ ಕಾರಣ ದಾವಾ ರಸ್ತೆ ಬಗ್ಗೆ ಹಕ್ಕು ಕೇಳಲು ಅರ್ಹನಲ್ಲ ಎಂದರೆ ಸರಿಯಲ್ಲ.

ನಾನು ಅಸ್ತಿತ್ವದಲ್ಲಿ ಇಲ್ಲದ ರಸ್ತೆಯ ಬಗ್ಗೆ ಪರಿಹಾರ ಕೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲಿನಿಂದ ದಾವಾ ರಸ್ತೆಯನ್ನು ಉಪಯೋಗಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದ ಕಾರಣ ನಮ್ಮ ಕುಟುಂಬದ ಇತರೇ ಸದಸ್ಯರು ಬಂದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಪ್ರತಿವಾದಿ ನಡುವೆ ಆಸ್ತಿ ವಿಚಾರವಾಗಿ ಕಲಹ ಇದ್ದು, ನಮ್ಮ ನಡುವೆ ಮಾತುಕತೆ ಇಲ್ಲ ಎಂದರೆ ಸರಿ. ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಪ್ರತಿವಾದಿ ಗೇಟ್ ಹಾಕಿದಾಗಿನಿಂದ ಮುನಿಸು ಆಗಿದೆ ಎನ್ನುತ್ತಾರೆ. ನನಗೆ ಮೊದಲಿನಿಂದ ಪ್ರತಿವಾದಿ ಜೊತೆ ದಾಯಾದಿ ಕಲಹ ಇತ್ತು ಎಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ಕೊಡಲು ಅಸ್ತಿತ್ವದಲ್ಲಿ ಇಲ್ಲದ ರಸ್ತೆಯ ಬಗ್ಗೆ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

ನಿ ಪಿ 3 ರಿಂದ ನಿ ಪಿ 8 ಫೋಟೋಗಳನ್ನು ನಾನೇ ಹಾಜರುಪಡಿಸಿದ್ದೇನೆ ಎನ್ನುತ್ತಾರೆ. ಸದರಿ ಫೋಟೋಗಳನ್ನು ವಾದಿ 2, 4 ರವರು ತೆಗೆದಿರಬಹುದು ಯಾರು ತೆಗೆದರು ಎಂದು ನನಗೆ ನಿಖರವಾಗಿ ಗೊತ್ತಿಲ್ಲ. ಫೋಟೋಗಳನ್ನು ಯಾವ ದಿನಾಂಕದಂದು ತೆಗೆದರು ಎಂದು ಗೊತ್ತಿಲ್ಲ. ನಿ ಪಿ 9 ಸಿ. ಡಿ. ಯನ್ನು ಯಾರು ಮಾಡಿದರು, ಹಾಗೂ ಹಾಜರುಪಡಿಸಿದರು ಎಂದು ನನಗೆ ಗೊತ್ತಿಲ್ಲ. ನಮ್ಮವರ ಪೈಕಿ ಯಾರು ಮಾಡಿದ್ದಾರೆ ಎನ್ನುತ್ತಾರೆ. ನಿ ಪಿ 31 ರಿಂದ ನಿ ಪಿ 36 ಫೋಟೋಗಳನ್ನು ಹಾಜರುಪಡಿಸಿದ್ದಾರೆ ಎಂದು ಗೊತ್ತಿಲ್ಲ ಆದರೆ ಮಕ್ಕಳು ಹಾಜರುಪಡಿಸಿರಬಹುದು ಎನ್ನುತ್ತಾರೆ. ಫೋಟೋಗಳನ್ನು ಯಾವ ದಿನಾಂಕದಂದು ಹಾಗೂ ಯಾರು ತೆಗೆದರು ಎಂದು ನನಗೆ ಗೊತ್ತಿಲ್ಲ. ನಿ ಪಿ 49 ನ್ನು ಏಕೆ ಹಾಜರುಪಡಿಸಿದ್ದೇವೆ ಎಂದು ನನಗೆ ಗೊತ್ತಿಲ್ಲ. ನಾನಾಗಲೀ ಇತರೇ ವಾದಿಯವರಾಗಲೀ ದಾವಾ ಪರಿಹಾರಕ್ಕೆ ಅರ್ಹರಲ್ಲ ಎಂದರೆ ಸರಿಯಲ್ಲ.

ಸರ್ವೆ ನಂ 3/5 ಕಡೇಮಾಡ ಎಂ. ನಂಜಪ್ಪ ಹಾಗೂ ಕೆ. ಎಂ. ಅಕ್ಕವ್ವ ನವರ ಹೆಸರಿಲ್ಲಿದೆ ಎಂದರೆ ಸರಿ. ನಂಜಪ್ಪ 6 ಜನ ಹೆಣ್ಣು ಮಕ್ಕಳಿದ್ದಾರೆ, ಅವರಿಗೆ ವಿವಾಹವಾಗಿರುತ್ತದೆ. ಒಬ್ಬರು ಮೃತರಾಗಿರುತ್ತಾರೆ. ಸದರಿ ನಂಜಪ್ಪನವರು ಮಕ್ಕಳನ್ನು ಪಕ್ಷದರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸರ್ವೆ ನಂ 3/4 ಕಡೇಮಾಡ ಎಂ. ನಂಜಪ್ಪ ಹೆಸರಿಲ್ಲಿದೆ ಎಂದರೆ ಸರಿ. ಆದರೆ ಸದರಿ ಜಾಗ ಎಲ್ಲಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ ಪಹಣಿಯನ್ನು ನಿ ಡಿ 1 ಎಂದು ಗುರುತಿಸಲಾಯಿತು.

ಮರು ವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.